ಉ) ಇದು ಅತ್ಯಂತ ಯಶಸ್ವಿಯಾದ ಸಮ್ಮೇಳನ. ಇದರಿಂದ ರಾಜ್ಯದ ಬಹಳ ಕೈಗಾರಿಕೋದ್ಯಮಿಗಳಲ್ಲಿ ಸದ್ಭಾವನೆ ಮೂಡಿದೆ.

ಊ) ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 254 ಯೋಜನೆಗಳಿಂದ ಸುಮಾರು27050.78 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆದಾರರಿಂದ ಪ್ರಸ್ತಾಪಿಸಲಾಗಿತ್ತು. ಇವುಗಳಲ್ಲಿ, 36 ಯೋಜನೆಗಳು ಕಾರ್ಯಗತಗೊಂಡಿದ್ದು, ರೂ.471.92 ಕೋಟಿ ಬಂಡವಾಳವನ್ನು ಮೊದಲನೇ ವರ್ಷದಲ್ಲಿ ರಾಜ್ಯದ ಉದ್ದಿಮೆಗಳಲ್ಲಿ ಹೂಡಲಾಗಿದೆ. ಹಾಗೂ ರೂ. 9991 ಕೋಟಿ ಅಂದಾಜು ಬಂಡವಾಳ ಹೂಡಿಕೆಯ 76 ಯೋಜನೆಗಳು ಕಾರ್ಯಗತದ ವಿವಿಧ ಹಂತಗಳಲ್ಲಿವೆ. ಅಲ್ಲದೆ ರೂ.1605 ಕೋಟಿ ಅಂದಾಜು ಬಂಡವಾಳದ 119 ಯೋಜನೆಗಳು ಕಾರ್ಯಗತದ ಅನುಮೋದನೆಯ ವಿವಿಧ ಹಂತಗಳಲ್ಲಿದೆ.

ಮಲಪ್ರಭಾ ಯೋಜನೆ ಪೂರ್ಣಗೊಳ್ಳುವುದು.

2481 (3159) ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಲಪ್ರಭಾ ಯೋಜನೆ ಎಂದು ಪೂರ್ಣಗೊಳ್ಳುವುದು (ವಿವರ ನೀಡುವುದು)

ಆ) 2001 ಹಾಗೂ 2002 ರಲ್ಲಿ ಮಲಪ್ರಭಾ ಬಲದಂಡೆ ಕಾಲುವೆಯಿಂದ ಎಷ್ಟು ಜಮೀನಿಗೆ ನೀರು ಒದಗಿಸುವ ಉದ್ದೇಶವಿದೆ?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ಮಲಪ್ರಭಾ ಯೋಜನೆಯನ್ನು 2002-03ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು ಒಟ್ಟು 220028 ಹೆ. ಪ್ರದೇಶ ನೀರಾವರಿ ಕ್ಷೇತ್ರದಲ್ಲಿ ಇಲ್ಲಿಯವರೆಗೆ 182360 ಹೆ. ಕ್ಷೇತ್ರದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಇನ್ನು 37668 ಹೆ. ಕ್ಷೇತ್ರಕ್ಕೆ ನೀರು ಒದಗಿಸಬೇಕಾಗಿದೆ.

ಯೋಜನೆಯ ಪರಿಷ್ಕೃತ ಅಂದಾಜು ಮೊತ್ತವು ರೂ.816.00 ಕೋಟಿ ರೂ. ಇದ್ದು ಜೂನ್ 2001 ರವರೆಗೆ ಒಟ್ಟು ರೂ.597.94 ಕೋಟಿ ರೂ. ವೆಚ್ಚ ಮಾಡಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸಲು ಇನ್ನು ರೂ. 218.06 ಕೋಟಿ ಮೊತ್ತ ಬೇಕಾಗಿದೆ

ಆ) ಪ್ರಸ್ತುತ 2001-02ನೇ ಸಾಲಿಗಾಗಿ ರೂಪಿಸಿರುವ ಕಾರ್ಯಕ್ರಮದಂತೆ ಮಲಪ್ರಭಾ ಬಲದಂಡೆ ಕಾಲುವೆಯಡಿ 6000 ಹೆ. ಜಮೀನಿಗೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ. ಉಳಿದ ಜಮೀನಿಗೆ 2002-03 ನೇ ಸಾಲಿನಲ್ಲಿ ನೀರಿನ ಸೌಲಭ್ಯ ಕಲ್ಪಿಸಲಾಗುವುದು.